# ಕನಸು ನೆನಪುಗಳ ನೆರಳಿನಲ್ಲಿ...

ಒಬ್ಬಾತ ಉದಯಿಸುತ್ತಿರುವ ಸೂರ್ಯನಿಗೆ ಬೆನ್ನು ಹಾಕಿ, ಪಶ್ಚಿಮ ದಿಕ್ಕಿಗೆ ಮುಖ ಮಾಡಿ ನಡೆಯುತ್ತಿದ್ದಾನೆಂದು ಕಲ್ಪಿಸಿಕೊಳ್ಳೋಣ. ಅವನ ನಿಡಿದಾದ ನೆರಳು ಅವನ ಮುಂದೆ ದಾರಿ ತೋರಿಸುವಂತೆ ಚಲಿಸುತ್ತಿರುತ್ತದೆ. ಸೂರ್ಯ ಆಕಾಶದಲ್ಲಿ ಮೇಲೇರಿ ಬಂದಂತೆಲ್ಲಾ ಆ ನೆರಳು ಗಾತ್ರದಲ್ಲಿ ಕಿರಿದಾಗುತ್ತಾ ಹೋಗುತ್ತದೆ; ನಡೆಯುವಾತನ ಸಮೀಪ ಸರಿಯುತ್ತಾ, ಸೂರ್ಯ ನಡುನೆತ್ತಿಗೆ ಬಂದಾಗ, ಕನಿಷ್ಠ ಗಾತ್ರಕ್ಕೆ ಕುಗ್ಗಿ, ಆತನ ಕಾಲ ಬುಡಕ್ಕೆ ಬರುತ್ತದೆ, ಸೂರ್ಯ ಪಶ್ಚಿಮಕ್ಕೆ ಹೊರಳಿಕೊಂಡಾಗ ನೆರಳು ವ್ಯಕ್ತಿಯ ಮುಂಭಾಗದಿಂದ ಹಿಂಬಾಗಕ್ಕೆ ಸ್ಥಳಾಂತರಗೊಂಡು, ಕ್ರಮೇಣ ಹಿರಿದಾಗುತ್ತಾ ಹೋಗುತ್ತದೆ. ಈ ಮೊದಲು ಮಾರ್ಗದರ್ಶಕನಂತಿದ್ದ ನೆರಳು ಈಗ ಹಿಂಬಾಲಕನಂತಾಗುತ್ತದೆ. ಸೂರ್ಯ ಮುಳುಗಿದೊಡನೇ ನೆರಳೂ ಕಾಣೆಯಾಗುತ್ತದೆ.

ನಮ್ಮ ಬದುಕಿನ ಪಯಣದಲ್ಲೂ ಇಂಥದೊಂದು ಪ್ರಕ್ರಿಯೆ ನಡೆಯುವುದನ್ನು ನಾವು ಗಮನಿಸಬಹುದು. ಮನುಷ್ಯನ ಬದುಕೆಂಬುದು ಒಂದರ್ಥದಲ್ಲಿ ಏರಿಕೆಯಿಂದ ಇಳಿಕೆಯ ಕಡೆಗೆ ನಡೆಯುವ ಪಯಣ, ಬಾಲ್ಯ, ತಾರುಣ್ಯ, ಯೌವನಗಳು ಮನುಷ್ಯನ ಜೀವಿತದ ಏರಿಕೆಯ ಕಾಲ; ಅಲ್ಲಿಂದ ಮುಂದಿನ ವೃದ್ಧಾಪ್ಯದ ಹಂತವೆಂಬುದು ಇಳಿಕೆಯ ಕಾಲ. ಇದೊಂದು ಪೂರ್ವದಿಂದ ಪಶ್ಚಿಮದ ಕಡೆಗಿನ ಪ್ರಯಾಣವೆನ್ನಬಹುದು, ಬಾಲ್ಯ ತಾರುಣ್ಯಗಳಲ್ಲಿ ಮನುಷ್ಯನನ್ನು ನೂರಾರು ಕನಸುಗಳು ಮುಂದೆ ಮುಂದೆ ನಡೆಯಲು ಪ್ರಚೋದಿಸುತ್ತವೆ. ಬಾಲ್ಯದ ಮುಗ್ಧತೆ ಹುಟ್ಟು ಹಾಕುವ ಕನಸುಗಳಂತೂ ವಾಸ್ತವದ ಹಂಗು ಎಳ್ಳಷ್ಟೂ ಇಲ್ಲದೆ– ನಿಡಿದಾದ ನೆರಳಿನಂತೆ– ಮನುಷ್ಯನ ಎದುರು ಚಾಚಿಕೊಂಡಿರುತ್ತವೆ. ತಾರುಣ್ಯದ ಹಂತದಲ್ಲಿ ವಾಸ್ತವದ ಅರಿವಿನ ಬೆಳಕು ಸ್ವಲ್ಪ ಪ್ರಖರಗೊಳ್ಳುವುದರಿಂದ ಕನಸುಗಳ ಗಾತ್ರ ಕುಗ್ಗುತ್ತದೆ. ಪ್ರೌಢಾವಸ್ಥೆ ತಲುಪುವಾಗ ಜೀವನಾನುಭವದ ಬೆಳಕಿನಿಂದಾಗಿ ಮನುಷ್ಯ ಕನಸುಗಳ ಲೋಕಕ್ಕೆ ವಿಮುಖನಾಗಿ ಲೌಕಿಕ ಸತ್ಯಗಳಿಗೆ ಮುಖಾಮುಖಿಯಾಗಲೇಬೇಕಾಗುತ್ತದೆ. ಆ ಘಟ್ಟದಲ್ಲಿ ನಡುಮಧ್ಯಾಹ್ನದ ನೆರಳಿನಂತೆ ಮನುಷ್ಯನ ಕನಸುಗಳು ಅತ್ಯಂತ ಹ್ರಸ್ವಗೊಳ್ಳುತ್ತವೆ. ವ್ಯಕ್ತಿ ಜೀವನದ ಪೂರ್ವಾರ್ಧಮುಗಿದು ಉತ್ತರಾರ್ಧ ಪ್ರಾರಂಭವಾದಾಗ ಕನಸುಗಳೆಲ್ಲಾ ಕರಗಿ, ನೆನಪುಗಳ ನೆರಳು ವ್ಯಕ್ತಿಯನ್ನು ಹಿಂಬಾಲಿಸುತ್ತದೆ, ಬದುಕು ಮುಂದುವರೆದಂತೆಲ್ಲಾ ನೆನಪುಗಳ ನೆರಳು ನಿಡಿದಾಗುತ್ತಾ ಹೋಗುತ್ತದೆ.

ಆ ನೆನಪುಗಳ ಪ್ರಪಂಚವೂ ಎಷ್ಟೊಂದು ವೈವಿಧ್ಯಪೂರ್ಣ! ಬಾಲ್ಯಕಾಲದ ಮುಗ್ಧ ಕಲ್ಪನೆಗಳಿಂದ ಚೋದಿತವಾದ ಚಟುವಟಿಕೆಗಳು; ತಾರುಣ್ಯದ ಹುಚ್ಚು ಸಾಹಸಗಳು; ಯೌವ್ವನದ ಹೊಂಗನಸುಗಳು, ನವಿರು ಭಾವಗಳು; ತಾಯಿ ತಂದೆ ಸೋದರ ಸೋದರಿಯರ ಪ್ರೀತಿ ವಾತ್ಸಲ್ಯಗಳ ಬೆಚ್ಚನೆಯ ಅನುಭವಗಳು; ಪ್ರಿಯ ಜನರ ಸಹವಾಸ ಸಾನ್ನಿಧ್ಯದ ಸ್ನಿಗ್ಧ ನೆನಹುಗಳು– ಇಂಥವೆಲ್ಲವನ್ನೂ ನಮ್ಮ ಮೆದುಳು ನೆನಪಿನ ಭಂಡಾರದಲ್ಲಿ ಶೇಖರಿಸಿಟ್ಟುಕೊಂಡಿರುತ್ತದೆ. ಅಲ್ಲಿ ಸೋಲು ಗೆಲುವುಗಳು, ಪ್ರತೀಕ್ಷೆ ವಿಷಾದಗಳಿರಬಹುದು; ಆತ್ಮೀಯರ ಅಗಲಿಕೆಯ ನೋವಿರಬಹುದು; ಕೃತಜ್ಞತಾಭಾವವನ್ನು ಉದ್ದೀಪಿಸುವ, ಇಲ್ಲವೇ ಪ್ರತೀಕಾರ ಭಾವನೆಯನ್ನು ಕೆರಳಿಸುವ ಅನುಭವಗಳೂ ಇರಬಹುದು. 'ತೇಹಿನೋ ದಿವಸಾ ಗತಾಃ' (ಅಂಥ ದಿನಗಳು ಕಳೆದು ಹೋದವು!) ಎಂಬ ನಿಟ್ಟುಸಿರನ್ನು ಹೊಮ್ಮಿಸುವ ನೆನಪುಗಳೂ ಇರಬಹುದು. ಅವೆಲ್ಲವೂ ಒಟ್ಟುಗೂಡಿ, ದಟ್ಟವಾಗುತ್ತಾ ವ್ಯಕ್ತಿಯ ಬದುಕಿನ ಉತ್ತರಾರ್ಧದಲ್ಲಿ ಹಾದಿಯುದ್ದಕ್ಕೂ ಅವನನ್ನು ನೆರಳಿನಂತೆ ಹಿಂಬಾಲಿಸುತ್ತವೆ.

ನೆನಪುಗಳೆಂದರೆ ಅನುಭವಗಳ ಪಳೆಯುಳಿಕೆಗಳು ಎನ್ನಬಹುದೇನೋ, ಇಂಥ ನೆನಪುಗಳಿಂದಾಗಿ ಮನಸ್ಸು ಮಾಗುತ್ತದೆ. ನಮ್ಮ ಬದುಕನ್ನು ಅದರ ಎಲ್ಲ ಮಿತಿಗಳೊಂದಿಗೆ ಸ್ವೀಕರಿಸುವ ಮನಃಸ್ಥಿತಿ ನಮಗೆ ಒದಗಿಬರಲು ಇಂಥ ನೆನಪುಗಳು ಅಗತ್ಯವೂ ಹೌದು. ಗತ ಜೀವನದ ವಿಷಾದದ, ದುಃಖದ ಕ್ಷಣಗಳ ನೆನಪುಗಳು ವರ್ತಮಾನದ ಸುಖದ ಕ್ಷಣಗಳ ಸವಿಯನ್ನು ಹೆಚ್ಚಿಸುತ್ತವೆ; ಕಷ್ಟವನ್ನು ಹಗುರಗೊಳಿಸುತ್ತವೆ, 'Sorrows remembered sweetens present joy' ಎಂಬ ಹೇಳಿಕೆ ಸುಳ್ಳಲ್ಲ, ಕನಸು ಕಾಣುವ, ಕನಸನ್ನು ಎಟುಕಿಸಿಕೊಳ್ಳುವುದಕ್ಕಾಗಿ ಹೋರಾಡುವ ಹಂತಗಳೆಲ್ಲವನ್ನೂ ದಾಟಿರುವ ವೃದ್ಧರ ಪಾಲಿಗೆ ಬದುಕಿನ ಪ್ರಯಾಣದಲ್ಲಿ ನೆನಪುಗಳೇ ಪಾಥೇಯವಾಗಿರುವುದು ಈ ಕಾರಣದಿಂದಲೇ.

ಸಂಜೆ ಬಾನಿನ ತುಂಬ ಹಗಲಿನ ನೆನಪುಗಳು ಹರಡಿಕೊಳ್ಳುವುದೊಂದು ಸಹಜ ವ್ಯಾಪಾರ!

■ ವೈನತೇಯ

## ಮಾತೇ ಮುತ್ತು

★ ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಿಸಾಕಿದ್ರೂನೆ– ಮೂಗ್ನಲ್ಲಿ ಕನ್ನಡ ಪದವಾಡ್ತೀನಿ!
-ಜಿ.ಪಿ.ರಾಜರತ್ನಂ

★ ಎನಿತು ಇನಿದು ಈ ಕನ್ನಡ ನುಡಿಯು, ಮನವನು ತಣಿಸುವ ಮೋಹನ ಸುಧೆಯು.
-ಆನಂದಕಂದ

★ ನನ್ನದು ಈ ಕನ್ನಡನಾಡು ನನ್ನದೋ! ಅವರಿವರದೆಂದು ಎಂದು ನನ್ನದೋ! ಅದು ನನ್ನದೆಂತು ಹಾಗೇ ನಿನ್ನದೋ! –ಈ ಕನ್ನಡನಾಡು.
-ಅಂಬಿಕಾತನಯದತ್ತ

★ ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು, ಅದು ಗೋವರ್ಧನಗಿರಿಯಾಗುತ್ತದೆ.
-ಕುವೆಂಪು

★ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ; ಹಸಿ ಗೋಡೆಯ ಹರಳಿನಂತೆ ಹುಸಿ ಹೋಗದ ಕನ್ನಡ.
-ಚೆನ್ನವೀರ ಕಣವಿ

★ ಪ್ರಪಂಚದಲ್ಲಿ ದೃಢ ಪತಿವ್ರತೆಯರಿಗೆ, ನಿರ್ಮಲ ಚರಿತ್ರರಿಗೆ ಎಷ್ಟು ಕಷ್ಟಗಳು ಬಂದರೂ ಸುಖವು ಲಭಿಸುತ್ತದೆ.
-ಕವಿ ಲಕ್ಷ್ಮೀಶ

★ ಪರರಿಗಾಗಿ ಯಾರು ಬದುಕುತ್ತಾರೋ ಅವರದೇ ನಿಜವಾದ ಬದುಕು; ಉಳಿದವರು ಜೀವಂತ ಶವಗಳು.
-ಎಚ್.ನರಸಿಂಹಯ್ಯ

★ ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ, ಅಷ್ಟೂ ದೊರಕಿದರೆ ಮತ್ತಷ್ಟರಾಸೆ.
-ಪುರಂದರದಾಸ

★ ನಿನ್ನೆಯನ್ನು ಕಂಡಿದ್ದೇನೆ, ಇಂದನ್ನು ಪ್ರೀತಿಸುತ್ತೇನೆ; ಆದ್ದರಿಂದ ನಾಳೆಯ ಭಯ ನನಗಿಲ್ಲ.
-ವಿಲಿಯಂ ಆಲನ್ ವೈಟ್

★ ಯಾವುದು ನಿನಗೆ ಬೇಕಾಗಿಲ್ಲವೋ ಅದನ್ನು ಇನ್ನೊಬ್ಬರಿಗೆ ಉಡುಗೊರೆಯಾಗಿ ಕೊಡಬಾರದೆಂಬುದೇ ಉಡುಗರೆ ಕೊಡಲು ಅನುಸರಿಸಬೇಕಾದ ಸುವರ್ಣ ಸೂತ್ರ.
-ಇ.ವಿ.ಲೂಕಾಸ್

★ ಉತ್ಸಾಹ ಇಲ್ಲದೆ, ಯಾರಿಂದಲೂ ಯಾವಾಗಲೂ ಅಮೋಘವಾದದ್ದೇನೂ ಸಾಧಿಸಲ್ಪಟ್ಟಿಲ್ಲ.
-ಎಮರ್‌ಸನ್

★ ನೀನು ಮಾಡಿದ ಉಪಕಾರದ ನೆನಪು ಮಾಡಿಕೊಡುವುದು ಬಯ್ದಂತೆಯೇ.
-ಡೆಮೋಸ್ತನೀಸ್

★ ನೂರು ಕುಲಗಳು ಸೇರಿ ಕನ್ನಡದ ಕುಲವಾಗಿ ಭಾರತಕೆ ಬಲವಾಗಿ ಬೆಳಗುತಿಹುದು.
-ಕಾವ್ಯಾನಂದ

★ ಉಪಕಾರವ ಮರೆವುದು ಲೇಸಲ್ಲ; ಅಪಕಾರವ ಅಂದೇ ಮರೆಯುವುದು ಲೇಸು.
ತಿರುವಳ್ಳುವರ್

★ ಸೂರ್ಯ ಕಾಸು ಕೊಟ್ಟವರಿಗೆ ಬೆಳಕು ಕೊಡುತ್ತೇನೆ ಎನ್ನುತ್ತಾನೆಯೇ?
-ತ.ರಾ.ಸು.

★ ಇನ್ನಷ್ಟು ಪಡೆಯುವ ಆಸೆಯಿಂದ ಉಪಕಾರ ಮಾಡಬೇಡಿ.
ಕುರಾನ್

★ ನಾವು ಉಪದೇಶಿಸಿದಂತೆ ನಡೆಯಬೇಕು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ನಾವು ನಡೆಯುವಂತೆ ಉಪದೇಶಿಸಬೇಕೆಂಬುದನ್ನು ಎಲ್ಲರೂ ಖಂಡಿಸುತ್ತಾರೆ!
-ಎಲ್.ಪಿ.ಸ್ಮಿತ್